# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

**ಸಿ ಸಿ ನಂಃ970/2013**

**ಪಿರ್ಯಾದುದಾರರು : ಕನಕಪುರ ಪುರ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿಗಳು : 4. ಮಾದಯ್ಯ**

ಬಿನ್ ಹನುಮಯ್ಯ
ವಯಸ್ಸು 55 ವರ್ಷಗಳು
ವಾಸಃ ಬ್ಯಾಲಾಳು ಗ್ರಾಮ
ಕಸಬಾ ಹೋಬಳಿ
**ಕನಕಪುರ ತಾಲ್ಲೂಕು.**

**<u>ಭಾ.ದಂ.ಸಂ.ಕಲಂ. 313 ರ ರೀತ್ಯಾ ಆರೋಪಿಗಳು ಹೇಳಿಕೆ</u>**

**ಪ್ರಶ್ನೆಃ 1. ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದೀರಾ?**

**ಉತ್ತರಃ**

**ಪ್ರಶ್ನೆಃ2. ಪ್ರಾಸಾ-2 ಶಂಭುಲಿಂಗಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಜಯರಾಮಯ್ಯ, ಚಾಸಾ-3 ಎಲ್.ನಂಜುಂಡಪ್ಪ ಮತ್ತು ಚಾಸಾ-4 ಎಸ್.ಎಲ್ ನಾಗರಾಜು ರವರು ನನಗೆ ಸಹೋದರರಾಗಬೇಕು ಮತ್ತು ಆರೋಪಿತರ ಪರಿಚಯವಿರುತ್ತದೆ ಎಂದು ಹಾಗೂ ಕಡಸಿಕೊಪ್ಪ ಗ್ರಾಮದಲ್ಲಿ ನಮ್ಮ ತಾಯಿ ಕೆಂಪಮ್ಮ ಇವರಿಗೆ ಸೇರಿದ ಸರ್ವೆ ನಂ.91/1 ಕ್ಷೇತ್ರ 1 ಎಕರೆ ಜಮೀನು ಅವರ ಮರಣದ ನಂತರ ನಾನು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?**

**ಉತ್ತರಃ-**

ಪ್ರಶ್ನೆಃ-3. ಪ್ರಾಸಾ-2 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ನನ್ನ ತಾಯಿ ದಿನಾಂಕ.03.10.1997 ರಂದು ಮೃತಪಟ್ಟಿರುತ್ತಾರೆಂದು, ದಿನಾಂಕ.1.2.2012 ರಂದು ಕನಕಪುರ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ 1 ನೇ ಆರೋಪಿ ಇತರ ಆರೋಪಿಗಳ ಜೊತೆ ಸೇರಿಕೊಂಡು ನನ್ನ ತಾಯಿಯ ಹೆಸರಿಗಿದ್ದ ಸರ್ವೆ ನಂ.91/1 ನ್ನು ತನ್ನ ಹೆಸರಿಗೆ ನೋಂದಣಿ ಮಾಡಿಸಿಕೊಂಡು ನಂತರ ತನ್ನ ಹೆಸರಿಗೆ ಖಾತೆಗಳನ್ನು ಬದಲಾಯಿಸಿಕೊಂಡಿರುತ್ತಾನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-4. ಪ್ರಾಸಾ-2 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ನನ್ನ ತಾಯಿ ಕೆಂಪಮ್ಮಳ ಹೆಸರಿನಲ್ಲಿ ಬೇರೊಬ್ಬ ವೃದ್ದೆಯನ್ನು ಕೆಂಪಮ್ಮ ಎಂದು ತೋರಿಸಿ ಪೋಟೋ ತೆಗೆಯಿಸಿ ಅಕ್ರಮ ನೋಂದಣಿ ಮಾಡಿಕೊಂಡು 1 ನೇ ಆರೋಪಿ ಇತರ ಆರೋಪಿತರೊಂದಿಗೆ ಕೂಡಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದು ಇರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-5. ಪ್ರಾಸಾ-2 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ನಂತರ ಸದರಿ ಅಕ್ರಮ ಕ್ರಯದ ಕುರಿತು ನನಗೆ ದೂರು ದಾಖಲಿಸುವ ಒಂದು ವಾರ ಮುಂಚೆ ತಿಳಿದುಬಂದಿದ್ದು, ನಂತರ ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಲು ಹೋದಾಗ ಹಾರೋಹಳ್ಳಿ ಪೊಲೀಸರು ಕೃತ್ಯ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಆಗಿದ್ದರಿಂದ ಸದರಿ ಪಿರ್ಯಾದಿಯನ್ನು ಕನಕಪುರ ಪುರ ಪೊಲೀಸ್ ಠಾಣೆಗೆ

ದೂರನ್ನು ಸಲ್ಲಿಸುವಂತೆ ಕಳುಹಿಸಿಕೊಟ್ಟಿರುತ್ತಾರೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-6. ಪ್ರಾಸಾ-2 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ನಂತರ ಕನಕಪುರ ಪುರ ಪೊಲೀಸ್ ಠಾಣೆಗೆ ಬಂದು ಆರೋಪಿತರ ವಿರುದ್ದ ಕ್ರಮ ಕೈಗೊಳ್ಳುವಂತೆ ನಾವು ದೂರನ್ನು ಕೊಟ್ಟಿರುತ್ತೇವೆಂದು ಹಾಗೂ ದೂರಿನೊಂದಿಗೆ ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಪೊಲೀಸರಿಗೆ ನೀಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ7. ಪ್ರಾಸಾ-3 ನಾಗರಾಜು ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರಿಂದ 3 ಜಯರಾಮಯ್ಯ, ಶಂಭುಲಿಂಗಯ್ಯ ಮತ್ತು ಎಲ್ ನಂಜುಂಡಪ್ಪ ರವರು ನನಗೆ ಅಣ್ಣಂದಿರಾಗಬೇಕೆಂದು ಹಾಗೂ ಆರೋಪಿತರು ಸುಳ್ಳು ದಾಖಲೆ ಸೃಷ್ಟಿಸಿ ಜಮೀನನ್ನು ಖಾತೆ ಮಾಡಿಸಿಕೊಂಡ ವ್ಯಕ್ತಿಗಳಾಗಿರುತ್ತಾರೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-8. ಪ್ರಾಸಾ-3 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಕಡಸಿಕೊಪ್ಪ ಗ್ರಾಮದಲ್ಲಿ ನಮ್ಮ ತಾಯಿ ಕೆಂಪಮ್ಮ ಇವರಿಗೆ ಸೇರಿದ ಸರ್ವೆ ನಂ.91/1 ಕ್ಷೇತ್ರ 1 ಎಕರೆ ಜಮೀನು ಅವರ ಮರಣದ ನಂತರ ನಾವು ಸದರಿ ಜಮೀನಿನ

ಸ್ವಾಧೀನಾನುಭವದಲ್ಲಿ ಇರುತ್ತೇವೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-9. ಪ್ರಾಸಾ-3 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ನನ್ನ ತಾಯಿ ದಿನಾಂಕ.03.10.1997 ರಂದು ಮೃತಪಟ್ಟಿರುತ್ತಾರೆಂದು ಹಾಗೂ ದಿನಾಂಕ.1.2.2012 ರಂದು ಕನಕಪುರ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ 1 ನೇ ಆರೋಪಿ ಇತರ ಆರೋಪಿಗಳ ಜೊತೆ ಸೇರಿಕೊಂಡು ನನ್ನ ತಾಯಿಯ ಹೆಸರಿಗಿದ್ದ ಸರ್ವೆ ನಂ.91/1 ನ್ನು ತನ್ನ ಹೆಸರಿಗೆ ಕ್ರಯ ನೋಂದಣೆ ಮಾಡಿಸಿಕೊಂಡು ನಂತರ ತನ್ನ ಹೆಸರಿಗೆ ಖಾತೆಗಳನ್ನು ಬದಲಾಯಿಸಿಕೊಂಡಿರುತ್ತಾನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-10. ಪ್ರಾಸಾ-3 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ನನ್ನ ತಾಯಿ ಕೆಂಪಮ್ಮಳ ಹೆಸರಿನಲ್ಲಿ ಬೇರೊಬ್ಬ ವೃದ್ದೆಯನ್ನು ಕೆಂಪಮ್ಮ ಎಂದು ತೋರಿಸಿ ಪೋಟೋ ತೆಗೆಯಿಸಿ ಅಕ್ರಮ ನೋಂದಣೆ ಮಾಡಿಕೊಂಡು 1 ನೇ ಆರೋಪಿ ಇತರ ಆರೋಪಿತರೊಂದಿಗೆ ಕೊಡಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದು ಇರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-11. ಪ್ರಾಸಾ-3 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಅಕ್ರಮ ಕ್ರಯ ನೋಂದಣಿಯಾದ ಒಂದು ವಾರದ ನಂತರ ನಮಗೆ ತಿಳಿದುಬಂದಿದ್ದು, ನಂತರ ದಿ.20.04.2012 ರಂದು ಹಾರೋಹಳ್ಳಿ ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಿರುತ್ತೇವೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-12. ಪ್ರಾಸಾ-3 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ದಿನಾಂಕ.11.05.2012 ರಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆಂದು ಹಾಗೂ ದಿನಾಂಕ.11.05.2012 ರಂದು ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ನಾನು ಹೇಳಿಕೆಯನ್ನು ನೀಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ13. ಪ್ರಾಸಾ-4 ಜಯರಾಮಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ದಿ.31.02.1968 ರಂದು ನನ್ನ ತಾಯಿ ಸರ್ವೆ ನಂ.91/1 ರಲ್ಲಿ ಕ್ಷೇತ್ರ 1 ಎಕರೆ ಜಮೀನನ್ನು ನಾರಾಯಣರಾವ್ ಮತ್ತು ನರಸೋ ಬಾಯಿ ಇವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದರು ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-14. ಪ್ರಾಸಾ-4 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ದಿ.3.10.1969 ರಂದು ನನ್ನ ತಾಯಿ ಕೆಂಪಮ್ಮ ಮೃತರಾಗಿದ್ದು, 1 ನೇ ಆರೋಪಿ ಗಿರಿಯಪ್ಪ ಇತನು ನನ್ನ ತಾಯಿ 1969 ರಲ್ಲೆ ಮೃತರಾಗಿದ್ದರೂ ದಿ.1.2.2012 ರಂದು ನನ್ನ ತಾಯಿಯ ಹೆಸರಿನಲ್ಲಿ ಬೇರೊಬ್ಬ ಕೆಂಪಮ್ಮಳನ್ನು ತಂದು ನನ್ನ ತಾಯಿಯ ಜಮೀನನ್ನು ತನ್ನ ಹೆಸರಿಗೆ ನೋಂದಣಿ ಕ್ರಯಪತ್ರ ಮಾಡಿಸಿಕೊಂಡು ಮೋಸ ಮಾಡಿರುತ್ತಾನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-15. ಪ್ರಾಸಾ-4 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಸದರಿ ಗಿರಿಯಪ್ಪ ಮೋಸದ ಕ್ರಯಪತ್ರ ಮಾಡಿಸಿದ 15 ದಿನಗಳ ನಂತರ ನನಗೆ ವಿಷಯ ಗೊತ್ತಾಗಿದ್ದು, ನಾನು ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-16. ಪ್ರಾಸಾ-4 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಸದರಿ ಹಾರೋಹಳ್ಳಿ ಪೊಲೀಸರು ಕನಕಪುರ ಪುರ ಪೊಲೀಸ್ ಠಾಣೆಗೆ ಹೋಗುವಂತೆ ದಿ.11.05.2012 ರಂದು ತಿಳಿಸಿರುತ್ತಾರೆಂದು ಹಾಗೂ ದಿ.11.05.2012 ರಂದು ಕನಕಪುರ ಪುರ ಪೊಲೀಸ್ ಠಾಣೆಯ ಪೊಲೀಸರು ಉಪನೋಂದಣಿಕಾರಿಗಳ ಕಚೇರಿಗೆ ಪೊಲೀಸರು, ನನ್ನನ್ನು ಮತ್ತು ಚಾಸಾ-2 ರಿಂದ 4 ಶಂಭುಲಿಂಗಯ್ಯ.ಎಲ್, ಎಲ್.ನಂಜುಂಡಪ್ಪ, ಎಸ್.ಎಲ್

ನಾಗರಾಜು ರವರನ್ನು ಕರೆದುಕೊಂಡು ಹೋಗಿ ಮಹಜರ್ ಜರುಗಿಸಿರುತ್ತಾರೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-17. ಪ್ರಾಸಾ-4 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಆರೋಪಿತರು ಕ್ರಯಪತ್ರದ ಆಧಾರದ ಮೇಲೆ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆಂದು ಹಾಗೂ ಆರೋಪಿತರು ನನಗೆ ಮೋಸ ಮಾಡಿದ್ದು, ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-18. ಪ್ರಾಸಾ-4 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ದೂರಿನೊಂದಿಗೆ ನಾನು ವಂಶವೃಕ್ಷ, ಪ್ರಮಾಣ ಪತ್ರ ಮತ್ತು 2011-12 ನೇ ಸಾಲಿನ ಪಹಣಿಯ ನೋಟರೈಸ್ಡ್ ಪ್ರತಿಯನ್ನು ಮತ್ತು ದಿ.31.05.1968 ರ ನೋಟರೈಸ್ಡ್ ಖರೀದಿ ಪತ್ರ, ಮ್ಯೂಟೇಷನ್ ಪ್ರತಿ ಮತ್ತು ನನ್ನ ತಾಯಿಯ ಉತ್ತರಕ್ರಿಯಾದಿ ಆಹ್ವಾನ ಪತ್ರಿಕೆಯ ಅಟೆಸ್ಟೇಡ್ ಪ್ರತಿಯನ್ನು ಮತ್ತು ದಿ.1.2.2012 ರ ಕ್ರಯಪತ್ರದ ನೋಟರೈಸ್ಡ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-19. ಪ್ರಾಸಾ-4 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಸದರಿ 1 ನೇ ಆರೋಪಿ ಮೋಸತನದಿಂದ ಸೃಷ್ಟಿಸಿದ ಕ್ರಯಪತ್ರಕ್ಕೆ ಮಾದಯ್ಯ, ಮಾದೇಗೌಡ, ಶಿವರಾಮು, ರವೀಂದ್ರ ಇವರುಗಳು ಸಾಕ್ಷಿದಾರರೆಂದು ಸಹಿ ಮಾಡಿರುತ್ತಾರೆಂದು, ಆರೋಪಿತರಲ್ಲಿ 3 ನೇ ಆರೋಪಿ ಮಾದೇಗೌಡ ಮಾತ್ರ ನಮ್ಮ ಊರಿನವರಾಗಿರುತ್ತಾರೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ20. ಪ್ರಾಸಾ-6 ಶ್ಯಾಮ್ ರವರು ತಮ್ಮ ಸಾಕ್ಷ್ಯದಲ್ಲಿ ನಾನು ದಿ.10.09.2009 ರಿಂದ ದಿ.24.07.2012 ರ ವರೆಗೆ ಅರಕ್ಷಕ ಉಪನಿರೀಕ್ಷಕರು ಎಂದು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆಂದು ಹಾಗೂ ದಿನಾಂಕ.27.04.2012 ರಂದು ಪಿಎಸ್ಐ ಶ್ರೀ ವಿನೋದ್ ಭಟ್ ಇವರಿಂದ ಕಡತವನ್ನು ಪಡೆದುಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-21. ಪ್ರಾಸಾ-6 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ದಿನಾಂಕ.08.05.2012 ರಂದು ನ್ಯಾಯಾಲಯದ ಅನುಮತಿ ಪಡೆದು ಕೃತ್ಯ ಸ್ಥಳದ ಆಧಾರದ ಮೇಲೆ ಕನಕಪುರ ಪುರ ಪೊಲೀಸ್ ಠಾಣೆಗೆ ಕಡತವನ್ನು ವರ್ಗಾವಣೆ ಮಾಡಿರುತ್ತೇನೆಂದು ಹಾಗೂ ಸದರಿ ಅರಕ್ಷಕ ಉಪನಿರೀಕ್ಷಕರು, ಕನಕಪುರ ಪೊಲೀಸ್ ಠಾಣೆಗೆ ನಿವೇದಿಸಿಕೊಂಡ ಪತ್ರವನ್ನು ನೋಡಿ ಗುರುತಿಸಿರುತ್ತಾರೆಂದು ಹಾಗೂ ಸದರಿ ಪತ್ರದಲ್ಲಿ ನಮೂದಿಸಿರುವ

ನಕಲು ದಾಖಲೆಗಳನ್ನು ಕನಕಪುರ ಪುರ ಪೊಲೀಸ್ ಠಾಣೆಗೆ ನೀಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ-

**ಪ್ರಶ್ನೆಃ22.** ಪ್ರಾಸಾ-8 ಕೃಷ್ಣಕುಮಾರ್.ಸಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ.19.07.2010 ರಿಂದ 06.09.2012 ರ ವರೆಗೆ ಕನಕಪುರ ಪುರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆಂದು ಹಾಗೂ ದಿನಾಂಕ.10.05.2012 ರಂದು ಸಂಜೆ 4ಃ30 ಗಂಟೆ ಸಮಯದಲ್ಲಿ ಹಾರೋಹಳ್ಳಿ ಪೊಲೀಸ್ ಠಾಣೆಯ ಹೆಚ್.ಸಿ 185 ಕೃಷ್ಣಮೂರ್ತಿ ರವರು ಸರಹದ್ದಿನ ಆಧಾರದ ಮೇಲೆ ಹಾರೋಹಳ್ಳಿ ಠಾಣಾ ಗುನ್ನ ನಂಬರ್ 106/2012 ರ ಪ್ರ.ವ.ವರದಿ, ದೂರು, ವರದಿ ಮತ್ತು ದಾಖಲೆಗಳನ್ನು ನನಗೆ ಹಾಜರುಪಡಿಸಿರುತ್ತಾರೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ-

**ಪ್ರಶ್ನೆಃ-23.** ಪ್ರಾಸಾ-8 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಸದರಿ ಪ್ರಕರಣವನ್ನು ಸರಹದ್ದಿನ ಆಧಾರದ ಮೇಲೆ ನಮ್ಮ ಠಾಣಾ ಗುನ್ನ ನಂ.96/2012 ರಲ್ಲಿ ದಿ.10.05.2012 ರಂದು ಪ್ರ.ವ.ವರದಿ ಯನ್ನು ದಾಖಲಿಸಿಕೊಂಡಿರುತ್ತೇನೆಂದು ಹಾಗೂ ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-24. ಪ್ರಾಸಾ-8 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಠಾಣಾ ಗುನ್ನ ನಂ.96/2012 ರ ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆಂದು ಹಾಗೂ ದಿ.11.05.2012 ರಂದು ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-25. ಪ್ರಾಸಾ-8 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆಂದು ಹಾಗೂ ಚಾಸಾ-2, 3, 5 ಮತ್ತು 6 ಎಲ್.ಶಂಭುಲಿಂಗಯ್ಯ, ಎಲ್. ನಂಜುಂಡಪ್ಪ, ಮೂರ್ತಿನಾಯ್ಕ ಮತ್ತು ರಾಮನಾಯ್ಕ ರವರ ಹೇಳಿಕೆಯನ್ನು ಪಡೆದಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-26. ಪ್ರಾಸಾ-8 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ದಿನಾಂಕ.06.6.2012 ರಂದು 1 ರಿಂದ 7 ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಸದರಿ ಆರೋಪಿತರು ಜಾಮೀನು ಪಡೆದು ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆಂದು ಹಾಗೂ 1 ನೇ ಆರೋಪಿಯ ಸ್ವಇಚ್ಛ ಹೇಳಿಕೆಯನ್ನು ದಿ.6.6.2012 ರಂದು ಪಡೆದಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ-27. ಪ್ರಾಸಾ-8 ರವರು ಮುಂದುರೆದು ತಮ್ಮ ಮುಖ್ಯವಿಚಾರಣೆಯಲ್ಲಿ ದಿನಾಂಕ.05.05.2012 ರಂದು ಉಪನೋಂದಣಾಧಿಕಾರಿಗಳು ಕನಕಪುರ ಕಚೇರಿಯಿಂದ ಸರ್ವೆ ನಂ.91/1 ರ 1 ಎಕರೆ ಜಮೀನಿಗೆ ಸಂಬಂಧಿಸಿದ ನೋಂದಾಯಿತ ದಸ್ತವೇಜಿ ದೃಢೀಕೃತ ನಕಲನ್ನು ಹಾರೋಹಳ್ಳಿ ಪೊಲೀಸರು ಪಡೆದು ನೀಡಿದ ಕ್ರಯಪತ್ರವನ್ನು ನೋಡಿ ಗುರುತಿಸಿರುತ್ತಾರೆಂದು ಹಾಗೂ ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯ ಲಭ್ಯವಾಗಿದ್ದರಿಂದ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದಿಯೆ?

ಉತ್ತರಃ-

ಪ್ರಶ್ನೆಃ28. ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆಃ29. ನೀವು ಸಾಕ್ಷಿ ವಿಚಾರಣೆ ಮಾಡಬಯಸುತ್ತೀರಾ?

ಉತ್ತರಃ

(ಆರೋಪಿ ಹೇಳಿಕೆಯನ್ನು ಸ್ವತಃ ನಾನೇ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢೀಕರಿಸುತ್ತೇನೆ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಕನಕಪುರ.

1. ಗಿರಿಯಪ್ಪ ಉಃ ಅಜ್ಜಪ್ಪ **(Abated)**
ಬಿನ್ ಲೇಟ್ ಪುಟ್ಟೇಗೌಡ
ವಯಸ್ಸು 80 ವರ್ಷಗಳು
ವಾಸಃ ಸೊಂಟೇನಹಳ್ಳಿ ಗ್ರಾಮ
ಹಾರೋಹಳ್ಳಿ ಹೋಬಳಿ
ಕನಕಪುರ ತಾಲ್ಲೂಕು.

2. ಶ್ರೀನಿವಾಸ ಬಿನ್ ರಾಮೇಗೌಡ
ವಯಸ್ಸು 52 ವರ್ಷಗಳು
ವಾಸಃ ಹುಲಿಬೆಲೆ ಗ್ರಾಮ
ಕನಕಪುರ ತಾಲ್ಲೂಕು

3. ಮಾದೇಗೌಡ ಬಿನ್ ಲೇಟ್ ಮಾದೇಗೌಡ
ವಯಸ್ಸು 52 ವರ್ಷಗಳು
ಸಿದ್ದೇನಹಳ್ಳಿ ಗ್ರಾಮ
ಹಾರೋಹಳ್ಳಿ ಹೋಬಳಿ
ಕನಕಪುರ ತಾಲ್ಲೂಕು

4. ಮಾದಯ್ಯ **(Abated)**
ಬಿನ್ ಹನುಮಯ್ಯ
ವಯಸ್ಸು 55 ವರ್ಷಗಳು
ವಾಸಃ ಬ್ಯಾಲಾಳು ಗ್ರಾಮ
ಕಸಬಾ ಹೋಬಳಿ
ಕನಕಪುರ ತಾಲ್ಲೂಕು.

5. ಮಾದಯ್ಯ ಬಿನ್ ಲೇಟ್ ಮಾದಯ್ಯ
ವಯಸ್ಸು 70 ವರ್ಷಗಳು
ವಾಸಃ ಕೊತ್ತನೂರು ಗ್ರಾಮ
ಕನಕಪುರ ತಾಲ್ಲೂಕು.

6. **ಕೆ.ಎಸ್. ಶಿವರಾಮು (Abated)**
ಬಿನ್ ಸಿಗರೇಟ್ ಸಿದ್ದಲಿಂಗೇಗೌಡ
ವಯಸ್ಸು 50 ವರ್ಷಗಳು
ವಾಸಃ ಮುರುಕಣಿ ಗ್ರಾಮ
ಕಸಬಾ ಹೋಬಳಿ
ಕನಕಪುರ ತಾಲ್ಲೂಕು

7. ವಿ. ವೀರೇಂದ್ರಸ್ವಾಮಿ **(Abated)**
ಬಿನ್ ವೆಂಕಟಯ್ಯ
ವಯಸ್ಸು 52 ವರ್ಷಗಳು
ವಾಸಃ ಉದಾರಹಳ್ಳಿ ಗ್ರಾಮ
ಕಸಬಾ ಹೋಬಳಿ
ಕನಕಪುರ ತಾಲ್ಲೂಕು